(ಇಂದು ದಿನಾಂಕಃ **20-05-2019** ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ.ಡಿ.ಆರ್. ವಕೀಲರಿಂದ ಃ-**

**1.** ನನ್ನ ತಾಯಿ ಮನೆ ಕುಮಟಾದ ಗುಜರಗಲ್ಲಿಯಲ್ಲಿ ಇದೆ. ನಾನು 14 – 15 ವರ್ಷಗಳಿಂದ ಕಾರವಾರದಲ್ಲಿ ನನ್ನ ಗಂಡನ ಮನೆಯಲ್ಲಿ ವಾಸವಿದ್ದೇನೆ. ಚಾ.ಸಾ.1 ರವರು 2012 ರಲ್ಲಿ ದೂರು ಸಲ್ಲಿಸಿದ ವಿಷಯ ನನಗೆ ತಿಳಿಯಿತು. ಅವರು ದೂರು ನೀಡಿದ ದಿನಾಂಕ ನೆನಪಿಲ್ಲ. 2012 ರಲ್ಲಿ ನೀಡಿರುತ್ತಾರೆ. ನನ್ನನ್ನು ಪೊಲೀಸರು ವಿಚಾರಣೆ ಮಾಡಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ನನ್ನ ತಾಯಿ ಚಾ.ಸಾ. 8 ಕುಮಟಾ ನಾಗದೇವಿ ರಸ್ತೆಯಲ್ಲಿ ವಾಸವಿದ್ದಾರೆ. ಚಾ.ಸಾ. 8 ನನ್ನ ಸಮಕ್ಷಮ ಆರೋಪಿತರಿಗೆ ಹಣ ಪಾವತಿ



ಮಾಡಿರುತ್ತಾರೆ. ನಾನು ಪೊಲೀಸರ ಬಳಿ ಚಾ.ಸಾ. 8 ಹಣ ಪಾವತಿ ಮಾಡಿದ ವಿಷಯ ಅವರಿಂದ ತಿಳಿಯಿತು ಎಂದು ಈಗ ಓದಿ ಹೇಳಿದಂತೆ ನಿ.ಡಿ.2 ರ ಪ್ರಕಾರ ಯಾವುದೇ ಹೇಳಿಕೆ ನೀಡಿಲ್ಲ. ನಾನು ಪ್ರಸ್ತುತ ಯಾವುದೇ ಕೆಲಸ ಮಾಡುತ್ತಿಲ್ಲ. ನನ್ನ ತಾಯಿ ಚಾ.ಸಾ. 8 ಕೂಡ ಯಾವುದೇ ಕೆಲಸ ಮಾಡುವುದಿಲ್ಲ. ಆರೋಪಿತರಿಗೆ ಪಾವತಿಸಲು ನಾವು ನನ್ನ ಗಂಡ ಮತ್ತು ತಂದೆಯಿಂದ ಹಣ ಸಹಾಯ ಪಡೆದಿಲ್ಲ. ನಾವು ಯಾವ ಮುಖಬೆಲೆಯ ನೋಟುಗಳಲ್ಲಿ ಹಣ ಪಾವತಿ ಮಾಡಿದ್ದೆವು ಎಂದು ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ಹಣ ಪಾವತಿ ಮಾಡಿದ ದಿನಾಂಕ ಹೇಳಲು ಬರುವುದಿಲ್ಲ. 2009 ರಲ್ಲಿ ಪಾವತಿ ಮಾಡಿರುತ್ತೇವೆ.

**2.** ನಾನು ಎಫ್.ಡಿ.ಎ. ಪರೀಕ್ಷೆಗೆ ಹಾಜರಾಗಿದ್ದೆನು. ಸದ್ರಿ ಪರೀಕ್ಷೆಯನ್ನು ಯಾವ ಅಧಿಸೂಚನೆಯಡಿ ನಿಗದಿಪಡಿಸಲಾಗಿತ್ತು ಎಂದು ನೆನಪಿಲ್ಲ. ನಾನು ಯಾವ ದಿನಾಂಕದಂದು ಸದ್ರಿ ಪರೀಕ್ಷೆಗೆ ಹಾಜರಾಗಿದ್ದೆನೆಂದು ನೆನಪಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿತರಿಗೆ ಒಟ್ಟೂ ರೂ. 60,000-00 ಪಾವತಿ ಮಾಡಿಲ್ಲ ಮತ್ತು ಅವರು ನೌಕರಿ ಕೊಡಿಸುವುದಾಗಿ ಆಶ್ವಾಸನೆ ನೀಡಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತು ನನ್ನಿಂದ

ಹಾಲ್‌ಟಿಕೇಟ್ ಪ್ರತಿ ಪಡೆದುಕೊಂಡಿರಲಿಲ್ಲ ಎಂದರೆ ಸರಿಯಲ್ಲ. ನಾನು ಚಾ.ಸಾ. 1 ರವರು ನೀಡಿದ ದೂರಿಗೆ ಸಹಕರಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವತ್ತೂ ನನ್ನ ತವರುಮನೆಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ನಾನು ಸದ್ರಿ ಹಾಲ್‌ಟಿಕೇಟ್‌ನ ಪ್ರತಿಯನ್ನು ತನಿಖೆ ಕಾಲದಲ್ಲಿ ನೋಡಿಲ್ಲ.

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಜೆ.ಎಂ.ಎಫ್.ಸಿ. ಕುಮಟಾ